O.S. No.245/18 D.W. 1 Dated :23-08-2022

ಮಧ್ಯಾಹ್ನ ಸಾಕ್ಷಿಯನ್ನು ಪುನಃ ಕರೆಸಿ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು: ಶ್ರೀ. ಕೆ.ಎನ್ . ವಕೀಲರಿಂದಃ

ಆನಂದ ಎಂಬುವವರು ಜಲಾಜ ಮತ್ತು ನನ್ನ ವಿರುದ್ಧ ಹಾಗೂ ಪಾರ್ವತಮ್ಮ ಎಂಬುವವರು ನನ್ನ ಹೆಂಡತಿ ಬಿಂದಮ್ಮ ಮತ್ತು ಜಲಾಜ ಎಂಬರುವವರ ವಿರುದ್ಧ ಹಾಗೂ ಲಕ್ಷಮ್ಮ ಎಂಬುವವರು ನನ್ನ ವಿರುದ್ಧ ಒಟ್ಟು ಮೂರು ದಾವೆಗಳನ್ನು ಹೊಡಿರುತ್ತಾರೆ ಎಂದರೆ ನನಗೆ ಗೋತ್ತಿಲ್ಲ, ಪ್ರತಿವಾದಿ ಪತ್ರ ತಾಯಾ ನನ್ನ ವಕೀಲರಿಗೆ ನೀಡಿರುತ್ತೇನೆ, ಹೆಚ್.ಪಿ. ಆನಂದರವರು ಯಾವ ಸ.ನಂಃ ಸಂಬಂಧಿಸಿದಂತೆ ದಾವೆ ಹೂಡಿರುತ್ತಾರೆ ಎಂದರೆ ನನಗೆ ಗೋತ್ತಿಲ್ಲ, ಆನಂದರವರ ತಂದೆಗೆ ಬಸವೇಗೌಡರವರಿಗೆ ದರಕಸ್ತು ಯಿಂದ ಸ್ವತ್ತು ಮಂಜೂರಾಗಿರುತ್ತದೆ ಎಂದರೆ ನನಗೆ ಗೋತ್ತಿಲ್ಲ, ಬಸವೇಗೌಡರ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ, ಸ್ವತ್ತು ಮಂಜೂರಾದ ನಂತರ ಬಸವೇಗೌಡರು ತಾವು ಮರಣ ಹೊಂದುವರೆವಿಗೂ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದುರು ಎಂದರೆ ಸಾಕ್ಷಿಯು 1993 ರವರೆಗೆ ಬಸವೇಗೌಡರವರ ಸ್ವಾಧೀನಾನುಭವದಲ್ದಿದು ನಂತರ ನನ್ನ ಸ್ವಾಧೀನಾನುಭವದಲಿರುತ್ತದೆ ಎಂದು ನುಡಿದಿರುತ್ತಾರೆ. 1993 ರಲ್ಲಿ ನಾನು ದಾವ ಸ್ವತ್ತಿನ ಸ್ವಾಧೀನ ಪಡೆದಿರುವುದಕ್ಕೆ ಯಾವುದೇ ದಾಖಲೆ ಇರುವುದಿಲ್ಲ, ನಾನು 1993 ರಿಂದ ದಾವ ಸ್ವತ್ತಿನ ಸ್ವಾಧೀನದಲ್ಲಿರುವುದಕ್ಕೆ ಪಾಹಣಿಯಲ್ಲಿ ನಮೂದು ಮಾಡಿಸಿರುವುದಿಲ್ಲ, ನಿಪಿ - 4 ರಲ್ಲಿ 1993 ರಿಂದ 1997-1998, 2000-2001 ರ ವರೆಗೆ ಬಸವೇಗೌಡ ಸ್ವಾಧೀನಾನುಭವದಲ್ಲಿರುತ್ತಾರೆ ಎಂದು ನಮೂದಿಸಿರುತ್ತಾರ ಎಂದರೆ ನನಗೆ ಗೊತ್ತಿಲ್ಲ, 1993 ರ ಸಾಲಿನಿಂದ ನಾನು ದಾವೆ ಸ್ವತ್ತಿನ ಸ್ವಾಧೀನಾನುಭವದಲ್ಲಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, 1997 ನೇ ಇಸವಿ ಯಲ್ಲಿ ನಾನು 1993 ರಿಂದ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿರುತ್ತೇನೆ ಎಂದು ತಹಸೀಲ್ದಾರ ರವರಿಗೆ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ, ಅರ್ಜಿಯ ಜೊತೆ ಸ್ವಾಧೀನಕ್ಕೆ ಯಾವ ದಾಖಲೆಗಳನ್ನು ಗಲತ್ತಿಸಿರುತ್ತೀರಿ ಎಂದರೆ ಸಾಕ್ಷಿಯು ಸ್ಥಳಕ್ಕೆ ಹಾಜರಾಗಿ ಸ್ವತ್ತಿನ ಸ್ವಾಧೀನತೆಯನ್ನು

ಪರೀಶಿಲಿಸಿ ಎಂದು ನುಡಿದಿರುತ್ತಾರೆ. ನಾನು ತಹಸೀಲ್ದಾರ ಬಗ್ಗೆ ಅರ್ಜಿ ಸಲ್ಲಿಸಿದ ಬಗ್ಗೆ ನನ್ನ ಬಳಿ ದಾಖಲೆಗಳು ಇರುವುದಿಲ್ಲ, ನಾನು ತಹಸೀಲ್ದಾರ ಅರ್ಜಿ ಸಲ್ಲಿಸಿದ ಸಮಯದಲ್ಲಿ ಬಸವೇಗೌಡರು ಬದುಕ್ಕಿದ್ದರು, ನಾನು ತಹಸೀಲ್ದಾರ ಅರ್ಜಿ ಸಲ್ಲಿಸಿದ ನಂತರ ತಹಸೀಲ್ದಾರ ಕಛೇರಿಯಲ್ಲಿ ಯಾವುದೇ ವಿಚಾರಣೆ ನಡೆದಿರುದಿಲ್ಲ, ಬಸವೇಗೌಡರ ಯಾವಗ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ನಿಪಿ - 10 ರಂತೆ ಬಸವೇಗೌಡರು ದಿಃ 10.07.1995 ರಂದು ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿಯು 1997 ರ ವರೆಗೂ ಬಸವೇಗೌಡರು ಬದುಕ್ಕಿದ್ದುರು ಎಂದು ನುಡಿಯುತ್ತಾರೆ, 1997 ರಲ್ಲಿ ಬಸವೇಗೌಡರು ಬದುಕ್ಕಿದ್ದುರು ಎಂಬುದಕ್ಕೆ ನನ್ನ ಬಳಿ ದಾಖಲೆಗಳು ಇರುವುದಿಲ್ಲ.

ನಾನು ತಹಸೀಲ್ದಾರ ಅರ್ಜಿ ಸಲ್ಲಿಸಿದ ನಂತರ, ತಹಸೀಲ್ದಾರ ಸ್ಥಳ ಪರಿಶೀಲನೆ ನಡಸಿ ಖಾತೆ ಮಾಡಿರುತ್ತಾರೆ, ನನ್ನ ಹೆಸರಿಗೆ ಆದಂತಹ ಮ್ಯೂಟೇಶನ್ ಎಕ್ಸಟ್ರಾಕ್ಟ ನ್ನು ನೋಡಿರುತ್ತೇನೆ. ನಿಪಿ - 6 ಕ್ಕೆ ಬಸವೇಗೌಡರು ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿತ್ತೇನೆ ಎಂದರೆ ಸರಿಯಲ್ಲ, 1996-97 ನೇ ಸಮಯದಲ್ಲಿ ಬಸವೇಗೌಡರು ಬದುಕಿರಲಿಲ್ಲ ಎಂದರೆ ಸರಿಯಲ್ಲ, ನಿಪಿ - 6 ಕ್ಕೆ ಬಸವೇಗೌಡರು ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಮಂಜುನಾಥ ರವರು ನನ್ನ ವಿರುದ್ಧ ವಂಶವೃಕ್ಷವನ್ನು ಪ್ರಶ್ನಿಸಿ ದಾವೆ ಹೂಡಿದ್ದರು ಎಂದರೆ ಸಾಕ್ಷಿಯು ದಾವೆಯು ವಜಾ ಗೊಂಡಿರುತ್ತದೆ ಎಂದು ನುಡಿತ್ತಾರೆ, ಆ ದಾವೆಯು ಡಿಕ್ರಿ ಯಾಗಿರುತ್ತದೆ ಎಂದರೆ ಸರಿಯಲ್ಲ, ಆ ದಾವೆ ಯಲ್ಲಿ ಇದೇ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ, ದಿಃ 10.03.2017 ರಂದು ಅಸಲು ದಾವ ನಂಃ 90/12 ರಲ್ಲಿ ಇದೇ ನ್ಯಾಯಾಲಯದಲ್ಲಿ ನನ್ನ ಪಾಟೀ ಸಾವಾಲಿನಲ್ಲಿ ಸ.ನಃ 78 ನನ್ನ ನೆಂಟರಿಗೆ ಮಂಜೂರಾಗಿರುತ್ತದೆ, ಸ.ನೇ 78 ನ್ನು ಬಸವೇಗೌಡರಿಂದ ಖರೀದಿ ಮಾಡಿರುತ್ತೇನೆ, ಸ.ನಃ 79 ನ್ನು ನನ್ನ ಹೆಂಡತಿಗೆ ಸೊಮಮ್ಮ ಅರಿಸಿಣ ಕುಂಕುವಕ್ಕೆ ನೀಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ, ನಾನು ನ್ಯಾಯಾಲಯಲಿ ಮೇಲಿನಂತೆ ಸಾಕ್ಷ್ಯೆ ನುಡಿದ್ದಿರು ಸಹ, ಸಾಕ್ಷಿ ನುಡಿದಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದೇನೆ ಎಂದರ ಸರಿಯಲ್ಲ.

ಸ.ನಂಃ 14/15, ಸ.ನಂಃ 78, 79, 80 ಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ದಾವೆ ಇತ್ಯಾರ್ಥಕಾ ಬಾಕಿ ಉಳಿದಿರುತ್ತಾವೆ ಎಂದರೆ ಸರಿ, ಸುಮಾರು 30 – 40 ವರ್ಷ ದಿಂದ ವಾದಿಯು ನನಗೆ ಜಮೀನಿನ ವಿಷಯದಲಿ ತೊಂದರೆ ನೀಡುತ್ತಿದ್ದಾರೆ ಎಂದರೆ ಸರಿ, ಮಂಜುನಾಥರವರು ಸ.ನಂಃ 78-79 ರ ಸ್ವತ್ತಿನ ಮಾಲೀಕರ ಸಂಬಂಧಿಕರು ಎಂದರೆ ನನಗೆ ಗೊತ್ತಿಲ್ಲ, ಯಾವುದೇ ಒಂದು ಸ್ವತ್ತಿನ ಹಕ್ಕು ವರ್ಗಾವಣೆ ಯಾಗಬೇಕಿದ್ದಲ್ಲಿ ಅದು ಕ್ರಯ , ದಾನಪತ್ರ ಅಥವಾ ವಿಭಾಗದ ಮುಖಂತರ ಮೂಲಕ ವರ್ಗಾಣೆ ಯಾಗಬೇಕು ಎಂದರೆ ಸರಿಯಲ್ಲ, ಹಕ್ಕು ದಾಖಲೆಗಳ ಬಗ್ಗೆ ದಾಖಲೆಗಳು ಇಲ್ಲದ್ದಿಲ್ಲಿ ಮ್ಯಾಟೇಷನ ನಡವಳಿಯನ್ನು ನಡೆಸಲು ತಹಸೀಲ್ದಾರವರಿಗೆ ಹಕ್ಕು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ, ನಾನು ದಾವ ಸ್ವತ್ತನಿ ಪ್ರತಿಕೂಲ ಸಾಕ್ಷಿಗೆ ನ್ಯಾಯಲಯದಿಂದ ಯಾವುದೇ ಆದೇಶ ಪಡೆದುಕೊಂಡಿರುದಿಲ್ಲ,

ತಹಸಿಲ್ದಾರರು ಸ್ಥಳ ಪರಿಶೀಲನೆ ನಡೆಸಿದ ಬಗ್ಗೆ ನಾನು ದಾಖಲೆಗಳನ್ನು ಪಡೆದುಕೊಂಡಿಲ್ಲ , ಆದರೆ ಮ್ಯುಟೇಷನ್ ಮತ್ತು ಎಂ ಆರ್ ನ್ನು ಪಡೆದುಕೊಂಡಿರುತ್ತೇನೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಡೆದಂತಹ ಎಲ್ಲಾ ನಡವಳಿಕೆಗಳ ಎಲ್ಲಾ ದಾಖಲೆಗಳನ್ನು ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಸ. ನಂ.14 ಕ್ಕೆ ಸಂಬಂಧಿಸಿದಂತೆ ಮಂಜುನಾಥರವರ ತಂದೆ ನನ್ನ ವಿರುದ್ಧ ದಾವೆ ನಂ. 439/1987 ರಂತೆ ದಾವೆ ಹೂಡಿದ್ದರು ಎಂದರೆ ಸಾಕ್ಷಿಯು ಸದರಿ ದಾವೆ ವಜಾಗೊಂಡಿರುತ್ತದೆ ಎಂದು ನುಡಿಯುತ್ತಾರೆ. ನಂತರದಲ್ಲಿ ಸದರಿ ದಾವೆಯು ಆಲೂರಿನ ನ್ಯಾಯಾಲಯಕ್ಕೆ ವರ್ಗಾವಣೆಗೊಂಡು ಓ ಎಸ್ 7/1999 ರಂತೆ ದಾಖಲಾಗಿತ್ತು ಎಂದರೆ ಸರಿ . ಎಂ ಆರ್. 4/81-82 ನ್ನು ಪ್ರಶ್ನಿಸಿ ಮಂಜುನ್ಧಾರವರ ತಂದೆ ರಂಗೇಗೌಡರು ಸಖಲೇಶಪುರದ ಎ.ಸಿ.ರವರ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ಆದೇಶದಲ್ಲಿ ಮ್ಯುಟೇಷನ್ ಆದೇಶವನ್ನು ವಜಾಗೊಳಿಸಿದ್ದು ಎಂದರೆ ಸರಿಯಲ್ಲ. ಸದರಿ ಆದೇಶದ ವಿರುದ್ದ ನಾನು ಡಿಸಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದೇನೆಂದರೆ ಸರಿ .

ಅ.ದಾವೆ ನಂ. 93/2011 ರಂತೆ ಮಂಜುನಾಥರವರು ನಮ್ಮ ವಿರುದ್ಧ ವಂಶವೃಕ್ಷವನ್ನು ಪ್ರಶ್ನಿಸಿ ದಾವೆ ಹೂಡಿದ್ದರು ಎಂದರೆ ಸರಿ . ಸದರಿ ದಾವೆಯು ವಾದಿಯ ಪರವಾಗಿ ಆದೇಶವಾಗಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ. 78 ರಿಂದ 80 ಕುಂದೂರು ಗ್ರಾಮಕ್ಕೆ ಸೇರಿದ ಸ್ವತ್ತುಗಳಾಗಿವೆ. ನಿಪಿ. 24 ಮತ್ತು 26

ರಂತೆ ಕಡಬಲಗಾಲ ವೃತ್ತ ಹಿಡುವಳಿ ಪ್ರಮಾಣ ಪತ್ರ ಪಡೆದಿರುತ್ತೇನೆಂದರೆ. ಸರಿ .  ನಾನು ಎಲ್ಲಾ ದಾಖಲೆಯನ್ನು ಸೃಷ್ಟಿಮಾಡಿ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ, ಮರುವಿಚಾರಣೆಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.